

## ದೀಪಿಕಾ- ರಣವೀರ್ ಕಣ್ಣಾಮುಚ್ಚಾಲೆ

ದೀಪಿಕಾ ಪಡುಕೋಣೆಯ ಹೊಸ ಪ್ರೇಮ ಪ್ರಸಂಗದ ಕಥೆಯಿದು. ಅತ್ತ ರಣಬೀರ್ ಕಪೂರ್ ಕೈಕೊಟ್ಟು ಕತ್ರೀನಾ ಜೊತೆ ದೇಶ ವಿದೇಶ ಸುತ್ತಾಡುತ್ತಿದ್ದರೆ, ಇತ್ತ ರಣವೀರ್ ಸಿಂಗ್ ಅಮರ ಪ್ರೇಮಿಯಂತೆ ದೀಪಿಕಾ ಹಿಂದೆ ಸುತ್ತುತ್ತಿದ್ದಾರೆ. ಈ ಪ್ರೇಮದ ಪರಿ ಉತ್ತುಂಗಕ್ಕೇರಿದೆ ಎಂಬುದು ಬರೀ ಗಾಳಿಮಾತಲ್ಲ. ದೀಪಿಕಾ ಕಸರತ್ತು ನಡೆಸುವ ಜಿಮ್‌ನಲ್ಲೇ ದಿನವೂ ರಣವೀರ್ ದೇಹದಂಡನೆಗೆ ಹೋಗುತ್ತಿದ್ದಾರೆ. ದಕ್ಷಿಣ ಮುಂಬೈನ ದೀಪಿಕಾ ನಿವಾಸದ ಬಳಿ ರಣವೀರ್ ಹಲವು ಬಾರಿ ಸುಳಿದಾಡಿದ್ದನ್ನು ಕಂಡವರಿದ್ದಾರೆ. ಚಿತ್ರೀಕರಣಕ್ಕೆ ದೀಪಿಕಾ ತೆರಳುವ ವೇಳೆ ರಣವೀರ್ ಸ್ವತಃ ಕಾರಲ್ಲಿ ಡ್ರಾಪ್ ಮಾಡುತ್ತಾರಂತೆ. ದೀಪಿಕಾ ಮನೆಗೆ ಮರಳುವ ಹೊತ್ತಿಗೆ ಆ ಜಾಗದಲ್ಲಿ ಮತ್ತೆ ರಣವೀರ್ ಹಾಜರ್!

'ಚೆನ್ನೈ ಎಕ್ಸ್‌ಪ್ರೆಸ್' ಚಿತ್ರದ ಸೆಟ್‌ಗೆ ದೀಪಿಕಾಗೋಸ್ಕರವೇ ರಣವೀರ್ ಬಂದದ್ದು ಸುದ್ದಿಯಾಗಿತ್ತು. ಆದರೆ ಅದಕ್ಕಿಂತಲೂ ರೋಚಕ ಸುದ್ದಿ ತುಸು ತಡವಾಗಿ ಬಹಿರಂಗವಾಗಿದೆ. ಚಿತ್ರದ ಪ್ರಚಾರದಲ್ಲಿ ತೊಡಗಬೇಕಿದ್ದ ದೀಪಿಕಾ ಎಷ್ಟು ಹೊತ್ತಾದರೂ ಪತ್ತೆಯೇ ಇಲ್ಲ. ಟೀವಿಯವರು ಕಾದು ಕಾದು ಸುಸ್ತಾಗಿ ದೀಪಿಕಾ ಎಲ್ಲಿ ಹೋದರು ಎಂದು ಅವರನ್ನು ಹುಡುಕುವ ಪ್ರಯತ್ನ ಮಾಡುತ್ತಿದ್ದರೆ, ಬರೋಬ್ಬರಿ ಎರಡು ಗಂಟೆಯ ಬಳಿಕ ದೀಪಿಕಾರ ವ್ಯಾನಿಟಿ ವ್ಯಾನ್‌ನಿಂದ ವ್ಯಕ್ತಿಯೊಬ್ಬರು ಕೆಳಗಿಳಿದದ್ದು ಕಂಡು ಟೀವಿ ತಂಡದವರಿಗೆಲ್ಲ ಅಚ್ಚರಿ! ನೋಡಿದರೆ ಕಣ್ಣಿಗೆ ಬಿದ್ದದ್ದು ಮುಖ ಮುಚ್ಚಿಕೊಂಡು ಓಡುವ ವ್ಯರ್ಥಪ್ರಯತ್ನ ಮಾಡುತ್ತಿದ್ದ ರಣವೀರ್ ಸಿಂಗ್! ಹಾಡಹಗಲೇ ಕಣ್ಣಾ-ಮುಚ್ಚಾಲೆ ಆಡುತ್ತಿರುವ ರಣವೀರ್ ಮತ್ತು ದೀಪಿಕಾರನ್ನು ಕಂಡು ರಣಬೀರ್ ಕಪೂರ್ ಹಾಗೂ ಕತ್ರೀನಾ ಮುಸಿಮುಸಿ ನಗುತ್ತಿರಬಹುದೆ?

## ಸಲ್ಲು ಮನೇಲಿ ಕತ್ರೀನಾ

ಸಲ್ಮಾನ್ ಖಾನ್ ಕುಟುಂಬದ ಸದಸ್ಯರ ಜತೆ ಸೇರಿ ಪ್ರತಿವರ್ಷವೂ ತಮ್ಮ ಮನೆಯಲ್ಲಿ ಗಣಪತಿ ಹಬ್ಬ ಆಚರಿಸುವುದು ಮಾಮೂಲು. ಅದರಲ್ಲಿ ಬಾಲಿವುಡ್‌ನ ಕೆಲ ಗಣ್ಯರೂ ಪಾಲ್ಗೊಳ್ಳುತ್ತಿರುತ್ತಾರೆ. ಆದರೆ ಈ ವರ್ಷ ಸಲ್ಲು ಮನೆಯ ಗಣಪತಿ ಹಬ್ಬಕ್ಕೆ ಹೆಚ್ಚಿನ ರಂಗು ಮೂಡಿತ್ತು. ಏಕೆಂದರೆ ಸಲ್ಲು ಮಿಯಾರ ಮಾಜಿ ಗೆಳತಿ ಕತ್ರೀನಾ ಕೈಫ್ ಅವತ್ತು ಬಂದಿದ್ದರಂತೆ.

ಈ ಹಿಂದೆ ಸಲ್ಲು ಮತ್ತು ಕ್ಯಾಟ್ ತೆಕ್ಕೆ ಹಾಕಿಕೊಂಡು ಓಡಾಡುತ್ತಿದ್ದುದನ್ನು ಕಂಡು ಇಬ್ಬರ ಮದುವೆ ಆದಂತೆಯೇ ಎಂದು ಸಂಭ್ರಮಿಸಿ ಮನೆಹುಡುಗಿಯಂತೆ ಆಕೆಯನ್ನು ನೋಡಿಕೊಳ್ಳುತ್ತಿದ್ದ ಸಲ್ಲು ಕುಟುಂಬ, ನಡುವೆ ಪ್ರೀತಿ ತುಂಡಾದ ಬಳಿಕ ಕ್ಯಾಟ್‌ರನ್ನು ದೂರವಿಟ್ಟಿತ್ತು. ಆದರೆ ಗಣೇಶ ಚತುರ್ಥಿಯಂದು ಕ್ಯಾಟ್ ಅದೇ ಸಲುಗೆಯಿಂದ ಮನೆಯೆಲ್ಲಾ ಸುತ್ತಾಡಿ ಹಬ್ಬ ಆಚರಿಸಿದ್ದಾರೆ. ಸಲ್ಮಾನ್ ಸಹೋದರಿ ಅರ್ಪಿತಾ ಮತ್ತು ಕ್ಯಾಟ್ ಪರಮಾತ್ಮ ಗೆಳತಿಯರಾಗಿದ್ದವರು. ಇಬ್ಬರ ನಡುವಿನ ವಿರಸವೂ ಈಗ ಅಂತ್ಯ ಕಂಡಿದೆ.

ಅಂದು ಸಲ್ಲು ಮಿಯಾ ಮನೇಲಿ ಸಲ್ಲುವಿನ ಮತ್ತೊಬ್ಬ ಮಾಜಿ ಗೆಳತಿ ಸಂಗೀತಾ ಬಿಜ್ಲಾನಿ, ಸೋನಾಕ್ಷಿ ಸಿನ್ಹಾ ಮತ್ತು ಮಲೈಕಾ ಅರೋರಾ ಕೂಡ ಅತಿಥಿಗಳಾಗಿದ್ದರು. ಮಲೈಕಾ ಮತ್ತು ಕತ್ರೀನಾ ನಡುವಣ ವೈರ ಎಲ್ಲರಿಗೂ ಗೊತ್ತಿದ್ದದ್ದೇ. ಆದರೆ ಅವತ್ತು ಇವರಿಬ್ಬರೂ ಮುಖಾಮುಖಿಯೇ ಆಗಲಿಲ್ಲ-ವಂತೆ. 'ಸದ್ಯ..!' ಎಂದು ಸಲ್ಲು ಮನೆಯವರು ನಿಟ್ಟುಸಿರುಬಿಟ್ಟರೆ, 'ಅಯ್ಯೋ! ಒಳ್ಳೆಯ ಸುದ್ದಿ ಮಿಸ್ ಆಯಿತಲ್ಲ' ಎಂದು ಬಿ-ಟೌನ್ ಪಂಡಿತರು ಬೇಸರ ಪಟ್ಟುಕೊಂಡರಂತೆ!

■ ಅಮಿ

